ಆ) ಈಗ ಹಾಲಿ ಮಂಜೂರಾದ ಪ್ರಸ್ತಾಪದ ಪ್ರಕಾರ ಬೇಕಾದ ಧನ ಸಹಾಯವನ್ನು ಕೆಳಗಿನ ಮೂಲದಿಂದ ಪಡೆಯಲು ಯೋಚಿಸಲಾಗಿದೆ.

೧.	ರಾಜ್ಯ ಸರ್ಕಾರ	ರೂ.	೨೦ ಕೋಟಿ
೨.	ಜೀವವಿಮಾ ನಿಗಮ	ರೂ.	೫೦ ಕೋಟಿ
೩.	ಬೆಂಗಳೂರು ನಗರ ಸಭೆ	ರೂ.	೩೦ ಕೋಟಿ
೪.	ವಿಶ್ವ ಬ್ಯಾಂಕ್	ರೂ.	೮೦ ಕೋಟಿ
	ಒಟ್ಟು	ರೂ.	೨೪೦ ಕೋಟಿ

ವಿಶ್ವ ಬ್ಯಾಂಕ್ ನಿಗದಿ ಪಡಿಸಿದ ನಿಯಮಗಳನ್ನು ಪರಿಪೂರ್ಣಗೊಳಿಸಿ ಧನ ಸಹಾಯ ಪಡೆಯಲು ಸಾಕಷ್ಟು ಸಮಯ (ಸುಮಾರು ೧೨ ವರ್ಷ) ತಗಲುವುದರಿಂದ. ವಿಶ್ವಬ್ಯಾಂಕ್ ಧನ ಸಹಾಯವಿಲ್ಲದೇನೇ, ಯೋಜನೆಯನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಮತ್ತು ಈ ದಿಶೆಯಲ್ಲಿ ಕೆಳಗೆ ಸೂಚಿಸಿರುವಂತೆ ಧನ ಸಹಾಯ ಪಡೆಯಲು ಉದ್ದೇಶಿಸಲಾಗಿದೆ.

೧.	ರಾಜ್ಯ ಸರ್ಕಾರ	ರೂ.	೧೧೨ ಕೋಟಿ
೨.	ಜೀವ ವಿಮಾ ನಿಗಮ	ರೂ.	೫೦ ಕೋಟಿ
೩.	ನಗರದ ಹಿರಿಯ ಉದ್ದಿಮೆಗಳು ಮತ್ತು ರಕ್ಷಣಾ ಇಲಾಖೆಯಿಂದ ಉದ್ದೇಶಿಸಿದ ಸಹಾಯ ಧನ	ರೂ.	೮೦ ಕೋಟಿ
೪.	ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ	ರೂ.	೩೦ ಕೋಟಿ
೫.	ಬೆಂಗಳೂರು ಮಹಾ ನಗರ ಪಾಲಿಕೆ	ರೂ.	೩೦ ಕೋಟಿ
	ಒಟ್ಟು	ರೂ.	೨೬೨ ಕೋಟಿ

ಆರ್.ಎಲ್.ಇ.ಜಿ.ಪಿ. ಕೆಲಸದ ಬಗ್ಗೆ

೯೯ (೨೦೫) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸಾಮಾನ್ಯ ಗ್ರಾಮೀಣ ಅಭಿವೃದ್ಧಿ ವಸತಿ ಮತ್ತು ಪಕ್ಷೇತರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೬-೮೭ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಆರ್.ಎಲ್.ಇ.ಜಿ.ಪಿ. ಕೆಲಸಗಳನ್ನು ಮಂಜೂರು ಮಾಡುವಾಗ ಶಾಸಕರ ಅಭಿಪ್ರಾಯವನ್ನು ಪಡೆಯದೆ ಮಂಜೂರಾತಿ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ಪಕ್ಷೇತರ ಮಂತ್ರಿಗಳು)

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಕೋಟೆಕಾರ್ ಮತ್ತು ಉಳ್ಳಾಲ ನೀರು ಸರಬರಾಜು ಯೋಜನೆ ಬಗ್ಗೆ

೯೦ (೧೮೧) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ). ಸಾಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ಪಕ್ಷೇತರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡದ ಉಳ್ಳಾಲ ಕ್ಷೇತ್ರದ ಕೋಟೆಕಾರು ಮತ್ತು ಉಳ್ಳಾಲ ನಳದ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಆ) ಸದರಿ ಯೋಜನೆಯನ್ನು ಶೀಘ್ರವಾಗಿ ಪೂರೈಸಲು ಯಾವ ಕ್ರಮ ಕೈಗೊಳ್ಳಲಾಗಿದೆ?